KACD420021532023

## ಹೊಳಲ್ಕೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ

### ಸಿ.ಸಿ. ನಂಃ 1455/2023

ಫಿರ್ಯಾದಿದಾರರು : ಸರ್ಕಾರದ ಪರವಾಗಿ – ಚಿಕ್ಕಜಾಜೂರು ಪೋಲೀಸ್ ಠಾಣೆ

**–ವಿರುದ್ಧ–**

ಆರೋಪಿತರು : 1. ಶ್ರೀನಿವಾಸ ಬಿನ್ ವೆಂಕಟೇಶ ಮತ್ತು ಇತರರು

### –:: ದೋ ಷಾ ರೋ ಪ ಣೆ ::–

ಶ್ರೀ ಉಮೇಶ, ಎಂ.ಪಿ., ಬಿ.ಎ.ಎಲ್., ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ಹೊಳಲ್ಕೆರೆ ಆದ ನಾನು

ಆರೋಪಿತರು :

1. ಶ್ರೀನಿವಾಸ ಬಿನ್ ವೆಂಕಟೇಶ,
   ವಯಸ್ಸುಃ 24 ವರ್ಷಗಳು, ವೃತ್ತಿಃ ವ್ಯವಸಾಯ,
   ವಾಸಃ ಹಿರೇಕಂದವಾಡಿ ಗ್ರಾಮ, ಹೊಳಲ್ಕೆರೆ ತಾಲ್ಲೂಕು .
   ಚಿತ್ರದುರ್ಗ ಜಿಲ್ಲೆ.
2. ಅರುಣ್ ಕುಮಾರ್ ಯಾನೆ ಅರುಣ ಬಿನ್ ಧರಣೇಂದ್ರಪ್ಪ ,
   ವಯಸ್ಸುಃ 26 ವರ್ಷಗಳು, ವೃತ್ತಿಃ ಚಿಲ್ಲರೆ ಅಂಗಡಿ ವ್ಯಾಪಾರಿ ,
   ವಾಸಃ ಬನಶಂಕರಿ ದೇವಸ್ಥಾನದ ಹತ್ತಿರ,
   ಚಿಕ್ಕಜಾಜೂರು ಗ್ರಾಮ, ಹೊಳಲ್ಕೆರೆ ತಾಲ್ಲೂಕು .
   ಚಿತ್ರದುರ್ಗ ಜಿಲ್ಲೆ.
3. ರಾಘವೇಂದ್ರ ಬಿನ್ ವೀರಾಚಾರಿ ,
   ವಯಸ್ಸುಃ 26 ವರ್ಷಗಳು, ವೃತ್ತಿಃ ಬಡಗಿ ಕೆಲಸ ,
   ವಾಸಃ ಯರಬಾಲ್ ಗ್ರಾಮ, ಹರಪನಹಳ್ಳಿ ತಾಲ್ಲೂಕು .
   ವಿಜಯನಗರ.
4. ಮಂಜುನಾಥ ಬಿನ್ ರವಿಕುಮಾರ ,
   ವಯಸ್ಸುಃ 25 ವರ್ಷಗಳು, ವೃತ್ತಿಃ ಬಡಗಿ ಕೆಲಸ ,
   ವಾಸಃ ಕಲ್ಲವ್ವನಾಗ್ತಿಹಳ್ಳಿ ಗ್ರಾಮ,
   ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿಃ 26-10-2023 ರಂದು ರಾತ್ರಿ 10-40 ರ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು ರಂಗವ್ವನಹಳ್ಳಿ ಗ್ರಾಮದ ಗೇಟ್ ಹತ್ತಿರ ಇರುವ ಬಿ.ದುರ್ಗ ಗ್ರಾಮದ ಸತೀಶ ಹಾಗೂ ಲಕ್ಷ್ಮಮ್ಮ ಬಿನ್ ನರಸ ಹೊಂಬಯ್ಯರವರ ಜಮೀನುಗಳ ಮಧ್ಯದಲ್ಲಿ ಹಾದು ಹೋಗಿರುವ ಚಿಕ್ಕಜಾಜೂರು-ದಾವಣಗೆರೆಯ ಟಾರ್ ರಸ್ತೆಯ ಪಕ್ಕ ಪೂರ್ವ ದಿಕ್ಕಿನ ಅಂಚಿನಲ್ಲಿ , ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಯ ಅಂಬುಲೆನ್ಸಗೆ ಹೊರ ಗುತ್ತಿಗೆಯ ಚಾಲಕನಾದ ಚಾಸಾ-1 ರವರು ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಯ ಕೆ.ಎ-16-ಜಿ-0523 ರ ಅಂಬುಲೆನ್ಸ್ ವಾಹನವನ್ನು ಚಾಲನೆ ಮಾಡಿಕೊಂಡು , ದಾವಣಗೆರೆಯಿಂದ ಹೊಳಲ್ಕೆರೆ ಕಡೆಗೆ ಹೋಗುತ್ತಿರುವಾಗ, ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಸಮಾನ ಉದ್ದೇಶದಿಂದ ಒಂದು ಮೋಟಾರ್ ಸೈಕಲ್ ನ ಜೊತೆಯಲ್ಲಿ ರಸ್ತೆಯ ಪಕ್ಕದಲ್ಲಿ ನಿಂತುಕೊಂಡು , ಅಂಬ್ಯುಲೆನ್ಸ್ ವಾಹನವನ್ನು ನಿಲ್ಲಿಸುವಂತೆ ಕೈ ಸನ್ನೆ ಮಾಡಿದ್ದು , ರಾತ್ರಿಯಾಗಿದ್ದರಿಂದ , ಚಾಸಾ-1 ರವರು ಹೆದರಿ , ಅಂಬುಲೆನ್ಸ್‌ನ್ನು ನಿಲ್ಲಿಸದೇ ಸ್ವಲ್ಪ ಮುಂದೆ ಬಂದಾಗ , ತಕ್ಷಣ 4 ನೇ ಆರೋಪಿತನಾದ ನೀನು ಕೆಎ-17-ಹೆಚ್ ಎಲ್-4781 ರ ಮೋಟಾರ್ ಸೈಕಲ್ ನಲ್ಲಿ 1 ರಿಂದ 3 ನೇ ಆರೋಪಿತರನ್ನು ಕೂರಿಸಿಕೊಂಡು , ಅಂಬುಲೆನ್ಸನ್ನು ಓವರ್ ಟೇಕ್ ಮಾಡಿ, ಮುಂದು ಬಂದು ತಮ್ಮ ಮೋಟಾರ್ ಸೈಕಲ್ ನ್ನು ಅಡ್ಡಲಾಗಿ ನಿಲ್ಲಿಸಿ , ಅಕ್ರಮ ಪ್ರತಿಬಂಧನವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾಂ.ದಂ.ಪ್ರ.ಸಂ. ಕಲಂ 341 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಜಗಳ ಮಾಡುವ ಸಮಾನ ಉದ್ದೇಶದಿಂದ, ಚಾಸಾ-1 ರವರು ಅಂಬುಲೆನ್ಸ್‌ನ್ನು ನಿಲ್ಲಿಸಿದ ತಕ್ಷಣ ಚಾಸಾ-1 ರವರ ಬಳಿ ಬಂದು ಚಾಸಾ-1 ರವರಿಗೆ ಏನೋ ಸೂಳೇಮಗನೆ, ಬೋಳಿಮಗನೆ ಅಂಬುಲೆನ್ಸ್ ನ್ನು ನಿಲ್ಲಿಸು ಅಂತ ಕೈ ಸನ್ನೆ ಮಾಡಿದರೂ ಸಹ ನಿಲ್ಲಿಸದೇ ಬರುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಆಪಾದಿಸಲಾಗಿರುತ್ತದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಜಗಳ ಮಾಡುವ ಸಮಾನ ಉದ್ದೇಶದಿಂದ, ನಿಮ್ಮಲ್ಲಿಯ 1 ನೇ ಆರೋಪಿತನಾದ ನೀನು , ಕಲ್ಲಿನಿಂದ ಸರ್ಕಾರಿ ಸ್ವತ್ತಾದ ಅಂಬುನೆನ್ಸ್ ನ ಮುಂದಿನ ಹಾಗೂ ಚಾಲಕನ ಸೀಟ್ ಪಕ್ಕದ ಡೋರ್ ನ ಗ್ಲಾಸ್ ಗೆ ಹೊಡೆದು ಜಖಂಗೊಳಿಸಿ ರೂ. 10,000/- ನಷ್ಟವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 427 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಆಪಾದಿಸಲಾಗಿರುತ್ತದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಜಗಳ ಮಾಡುವ ಸಮಾನ ಉದ್ದೇಶದಿಂದ, ಚಾಸಾ-1 ರವರನ್ನು ಅಂಬುಲೆನ್ಸ್ ನಿಂದ ಕೆಳಗೆ ಎಳೆದುಕೊಂಡು ಕೈ ಕಾಲುಗಳಿಂದ ಚಾಸಾ-1 ರವರ ಮುಖಕ್ಕೆ , ಎದೆಗೆ , ಮೈ ಕೈಗೆ ಹೊಡೆದು , ಆರೋಪಿತರೆಲ್ಲರೂ ಸೇರಿಕೊಂಡು ಸೂಳೇಮಗನೇ ಅಂಬುಲೆನ್ಸ್ ನಿಲ್ಲಿಸಲು ಹೇಳಿದರೂ ಕೈ ಸನ್ನೆ ಮಾಡಿದರೂ ನಿಲ್ಲಿಸದೇ ಹಾಗೆ ಬರುತ್ತೀಯ ಎಷ್ಟು ಧಿಮಾಕು ನಿನಗೆ ಎಂದು ಕಾಲಿನಿಂದ ತುಳಿದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡುತ್ತೀರೆಂದು ಆಪಾದಿಸಲಾಗಿರುತ್ತದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಜಗಳ ಮಾಡುವ ಸಮಾನ ಉದ್ದೇಶದಿಂದ ಸರ್ಕಾರಿ ಸ್ವತ್ತಾದ ಅಂಬುನೆನ್ಸ್ ನ ಮುಂದಿನ ಹಾಗೂ ಚಾಲಕನ ಸೀಟ್ ಪಕ್ಕದ ಡೋರ್ ನ ಗ್ಲಾಸ್ ಗೆ ಕಲ್ಲಿನಿಂದ ಹೊಡೆದು ಸರ್ಕಾರಿ ಸ್ವತ್ತಾದ ಅಂಬುಲೆನ್ಸ್‌ನ್ನು ಹಾಳು ಮಾಡಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಪ್ರಿವೆನ್ಷನ್ ಆಫ್ ಡ್ಯಾಮೇಜ್ ಟು ಪಬ್ಲಿಕ್ ಪ್ರಾಪರ್ಟಿ ಆಕ್ಟ್ 1984 ಕಲಂ 3(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ನೀವು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಸಿವಿಲ್ ನ್ಯಾಯಾಧೀಶರು ಮತ್ತು

ದಿಃ **23**-05-2024

ಜೆ ಎಂ ಎಫ್ ಸಿ, ಹೊಳಲ್ಕೆರೆ.